## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದು ಮುಖ್ಯ ವಿಚಾರಣೆ 2 ನೇ ಎದುರುದಾರರ ಪರ ವಕೀಲರಿಂದಃ**

ಈ ಹಂತದಲ್ಲಿ ಸಾಕ್ಷಿ ವಿಚಾರಣೆಯನ್ನು ಪರಿಶೀಲಿಸಲಾಗಿ ನಿಆರ್.4 ಎಂದು ಈಗಾಗಲೇ ದಾಖಲೆಯನ್ನು ಗುರುತಿಸಿದ್ದು ಪುನಃ ಆರ್ ಡಬ್ಲ್ಯು.2 ಪರವಾಗಿ ಅಧಿಕಾರ ಪತ್ರವನ್ನು ನಿಆರ್.4 ಎಂದು ಗುರುತಿಸಿದ್ದು ಅದನ್ನು ಅರ್ಜಿದಾರರ ಪರ ವಕೀಲರ ಸಮ್ಮತಿಯ ಮೇರೆಗೆ ನಿಆರ್.4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ವಿಟಿಕೆ ವಕೀಲರಿಂದಃ**

ಅಪಘಾತದ ಬಗ್ಗೆ ನಮ್ಮ ಕಂಪನಿಯ ಪರವಾಗಿ ನಮ್ಮದೇಯಾದ ತನಿಖೆ ಮಾಡಿಸಿರುವುದಿಲ್ಲ ಆದರೆ ಪೊಲೀಸರು ಮಾಡಿದ ತನಿಖೆಯನ್ನು ಆಧರಿಸುತ್ತಿದ್ದೇವೆ. ನಮ್ಮ ಕಂಪನಿಯಲ್ಲಿ ತನಿಖೆ ಮಾಡುವವರು ಇಲ್ಲ ಹಾಗೂ ಯಾವ ಪ್ರಕರಣದಲ್ಲಿಯೂ ಸಹ ನಾವು ಆ ರೀತಿ ಆಂತರಿಕ ತನಿಖೆ ಮಾಡುವುದಿಲ್ಲ. ಅಪಘಾತವಾದ ಸಮಯದಲ್ಲಿ ಲಾರಿ ಸಂ.ಕೆಎ-25/ಎಬಿ-3339 ಇದು ಲೋಡ್ ಮಾಡಿದ ವಾಹನವಾಗಿತ್ತೋ ಅಥವಾ ಅನ್ ಲೋಡೆಡ್ ವಾಹನವಾಗಿತ್ತೋ ಎಂದು ನಾವು ಪರಿಶೀಲನೆ ಮಾಡಿಲ್ಲ. ಆರ್.ಟಿ.ಓ.,ದವರು ಈ ಪ್ರಕರಣದಲ್ಲಿ ನೀಡಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಆ್ರ್ ಟಿ ಓ ಈ ರೀತಿ ಹೇಳಿರುತ್ತಾರೆಂದು ನಾನು ಹೇಳಿದ್ದು ಆ ಬಗ್ಗೆ ನಾನು ದಾಖಲೆ ನೋಡಿಲ್ಲ ಆದರೆ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನೋಡಿ ಹೇಳುತ್ತಿದ್ದೇನೆ.

2. ವಿಮೆ ಪಾಲಿಸಿಯನ್ನು ನೀಡಬೇಕಾದರೆ ನಾವು ವಾಹನದ ಆರ್ ಸಿ ಬುಕ್ ಮತ್ತು ಪರ್ಮಿಟ್ ಇದೆ ಅಥವಾ ಇಲ್ಲ ಎಂದು ನೋಡುತ್ತೇವೆ. ನಿಆರ್.2 ಲಾರಿ ಸಂ.ಕೆಎ-25/ಎಬಿ-3339 ಇದರ ಪರ್ಮಿಟ್ ಆಗಿರುತ್ತದೆ ಎಂದರೆ ಸರಿ. ನಿಆರ್.2 ರಲ್ಲಿ RLW ಎಂದರೆ gross vehicle weight ಎಂದು ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ಲಾರಿ ಸಂ.ಕೆಎ-25/ಎಬಿ-3339 ರ ಚಾಲಕ ಸೂಕ್ತ ಚಾಲನಾ ಪರವಾನಿಗೆ ಪತ್ರ ಹೊಂದಿದ್ದರೂ ಸಹ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್.3 ಚಾಲನಾ ಪರವಾನಿಗೆ ಪತ್ರ ದಿಃ24-06-2009 ರಿಂದ 23/06/2029 ರವರೆಗೆ ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿ ಹೌದು ಆದರೆ ಸದರಿ

ಪರವಾನಿಗೆ ಪತ್ರ ಲಘು ವಾಹನ ಚಾಲನೆಗೆ ಇರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಒಂದು ಕ್ಷೇತ್ರದಲ್ಲಿ ಶಿಕ್ಷಣಕ್ಕಿಂತ ಅನುಭವ ಮಹತ್ವದ್ದು ಎಂದರೆ ಸಾಕ್ಷಿ ಅವರ ಅನುಭವದ ಆಧಾರದ ಮೇಲೆ ಅವರಿಗೆ ಲೈಸನ್ಸ ನೀಡಿರುತ್ತಾರೆಂದು ನುಡಿಯುತ್ತಾರೆ. ಲಾರಿ ಸಂ.ಕೆಎ-25/ ಎಬಿ-3339 ರ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಪತ್ರ ಹೊಂದಿದ್ದರೂ ಅರ್ಜಿದಾರರಿಗೆ ನೀಡಬೇಕಾದ ಪರಿಹಾರವನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**